| | |
|---|---|
| **ಪ್ರಧಾನ ಹಿರಿಯ ದಿವಾಣಿ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ ಜಮಖಂಡಿ.** | |
| **ಸಿ.ಸಿ. ನಂ.30/2022** | |
| | **ಚಾಸಾ - 1** |
| | **ಪ್ರಾಸಾ - 1** |
| ಸಾಕ್ಷಿದಾರರ ಹೆಸರು | ಮೆಹರರಾಮ ಚೌಧರಿ |
| ತಂದೆ/ಗಂಡ/ತಾಯಿ ಹೆಸರು | ಪುನರರಾಮ |
| ವಯಸ್ಸು | 35 ವರ್ಷ |
| ಉದ್ಯೋಗ | ವ್ಯಾಪಾರ |
| ವಾಸಸ್ಥಳ | ಸಾವಳಗಿ, ತಾಃ-ಜಮಖಂಡಿ. |

**ಸಾಕ್ಷಿಯನ್ನು ದಿನಾಂಕಃ-13.12.2023 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ-ಸ.ಸ.ಅ ರವರಿಂದಃ-**

ಮಾರ್ಚ 2020 ರಲ್ಲಿ ನನ್ನ ಅಂಗಡಿಯಲ್ಲಿ ಕಳ್ಳತನವಾಗಿತ್ತು. ನಾನು ದಿನಾಂಕ 02.03.2020 ರಂದು ಅಂಗಡಿಯ ಬಾಗಿಲನ್ನು ಮುಚ್ಚಿಕೊಂಡು ಹೋಗಿದ್ದು, ಮಾರನೇ ದಿನ ಬೆಳಿಗ್ಗೆ ಬಂದು ನೋಡಿದಾಗ ನಮ್ಮ ಅಂಗಡಿಯಲ್ಲಿ ಕಳ್ಳತನವಾಗಿತ್ತು. ಅಂಗಡಿಯಲ್ಲಿ ಒಂದು ಹೆಚ್.ಪಿ. ಒಂದು ಮೋಟಾರು, 5 ಹೆಚ್.ಪಿ.ಯ ಎರಡು ಮೋಟಾರುಗಳು ಕಳ್ಳತನವಾಗಿದ್ದವು. ಸದರಿ ಮೋಟಾರುಗಳ ಕಿಮ್ಮತ್ತು ರೂ.6,000-00 ಗಳಾಗುತ್ತದೆ. ನಂತರ ಪೋಲೀಸ ಠಾಣೆಗೆ ಹೋಗಿ ಪ್ರಥಮ ವರ್ತಮಾನ ಹೇಳಿಕೆಯನ್ನು ನೀಡಿದ್ದೇನೆ. ಪ್ರಥಮ ವರ್ತಮಾನ ಹೇಳಿಕೆಯಲ್ಲಿನ ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಪ್ರಥಮ ವರ್ತಮಾನ ಹೇಳಿಕೆಯನ್ನು ನಿಪಿ-1 ಎಂದು ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಂತರ ಪೋಲೀಸರು ಸ್ಥಳಕ್ಕೆ ಬಂದು ಪರಿಶೀಲನೆ ಮಾಡಿದ್ದಾರೆ ಮತ್ತು ಭಾವಚಿತ್ರಗಳನ್ನು ತೆಗೆದುಕೊಂಡಿದ್ದಾರೆ. ಸ್ಥಳ ಮಹಜರ ಮೇಲಿರುವ ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸ್ಥಳ ಮಹಜರನ್ನು ನಿಪಿ-2 ಎಂದು ಸಾಕ್ಷಿ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. 4 ಭಾವಚಿತ್ರಗಳನ್ನು ನಿಪಿ-3 ರಿಂದ ನಿಪಿ-6 ಎಂದು ಗುರುತಿಸಲಾಯಿತು. ಅದೇ ದಿನ ಮಹಜರನ್ನು ಮಾಡಿದ್ದಾರೆ. ಆಗ ಸಮಯ 11-00 ರಿಂದ 12-00 ಗಂಟೆಯಾಗಿದೆ.

ಪೋಲೀಸರ ಮುಂದೆ ನಾನು ಮರುಹೇಳಿಕೆ ನೀಡಿದ್ದೇನೆ. ನಾನು ಪ್ರಥಮ ವರ್ತಮಾನ ಹೇಳಿಕೆ ಕೊಟ್ಟ 2-3 ದಿನಗಳ ನಂತರ ಪೋಲೀಸರು ಆರೋಪಿತರನ್ನು ದಸ್ತಗೀರ ಮಾಡಿದ್ದಾರೆ. ಪೋಲೀಸ ಠಾಣೆಯಲ್ಲಿ ಹೋದಾಗ ನನ್ನ ಕಳುವಾದಂತಹ ಮೋಟಾರುಗಳು ಇದ್ದವು. ಪೋಲೀಸ

ಠಾಣೆಯಲ್ಲಿ ಆರೋಪಿತರನ್ನು ತೋರಿಸಿ ಅವರ ಹೆಸರು ಸದಾಶಿವ ಮತ್ತು ಹಣಮಂತ ಎಂದು ಹೇಳಿದ್ದಾರೆ. ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ಸಾಕ್ಷಿ ನೋಡಿ ಗುರುತಿಸುತ್ತಾರೆ.

ಮುಂದುವರೆದ ಮುಖ್ಯ ವಿಚಾರಣೆಗೆ ಸ.ಸ.ಅ ರವರು ಸಮಯ ಕೋರಿದ್ದರಿಂದ ಮುಂದೂಡಾಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ. ಸರಿ ಅದೆ.

ಸಹಿ/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಮ್.ಎಫ್.ಸಿ. ಜಮಖಂಡಿ.

ಸಾಕ್ಷಿಯ ಸಹಿ